Date: 03-08-2026 OS No.87/2019
(DW-4)

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಶ್ರೀ ಎನ್ ಎಸ್ ಜಿ ವಾದಿ ಪರ ವಕೀಲರಿಂದಃ

ನಾನು 2007 ರಿಂದ ವಕೀಲ ವೃತ್ತಿಯನ್ನು ಮಾಡುತ್ತಾ ಇರುತ್ತೇನೆ. ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ಸಮನ್ಸ ಜಾರಿಯಾಗಿಲ್ಲ. 5 ನೇ ಪ್ರತಿವಾದಿಯ ಕೋರಿಕೆಯ ಮೇರೆಗೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಪತ್ರ ಬರೆಯುವ ಪೂರ್ವದಲ್ಲಿ ಪಕ್ಷಗಾರರು ಹಾಜರು ಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿ ನಂತರ ಪತ್ರ ಬರೆಯುತ್ತೇವೆ. ಕ್ರಯ ಪತ್ರ ಬರೆಯುವ ಪೂರ್ವದಲ್ಲಿ, ಕ್ರಯ ಪತ್ರದಲ್ಲಿರುವ ಸ್ವತ್ತಿನ ಪಹಣಿ ಮತ್ತು ಪತ್ರ ಬರೆಸುವವರ ಆಧಾರ ಕಾರ್ಡಗಳನ್ನು ಪರಿಶೀಲಿಸಿ ಪತ್ರವನ್ನು ಬರೆದಿರುತ್ತೇನೆ. ಸ್ವತ್ತನ್ನು ಖರೀದಿ ಕೊಟ್ಟವರು ನೀಡಿದ ಮಾಹಿತಿಯ ಮೇರೆಗೆ ಕ್ರಯ ಪತ್ರವನ್ನು ತಯಾರಿಸಿರುತ್ತೇನೆ. ನಿಡಿ-1 ರಲ್ಲಿ ಬರೆಯಲಾದ ಹೇಳಿಕೆ "ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಿದ್ದು ಮತ್ತು ಮದುವೆಗೆ ಸಾಕಷ್ಟು ಖರ್ಚು ಮಾಡಿದ್ದು" ಎನ್ನುವ ಹೇಳಿಕೆ ಬರೆಯುವ ಪೂರ್ವದಲ್ಲಿ ಸದರಿ ಹೇಳಿಕೆಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನಾನು ಪರಿಶೀಲಿಸಿರುವುದಿಲ್ಲ. ಸಾಕ್ಷಿಯು ಸ್ವತಃ ಸದರಿ ಹೇಳಿಕೆಯನ್ನು ಬರೆಯಲು ಸ್ವತ್ತನ್ನು ಕ್ರಯಕ್ಕೆ ನೀಡುವವರು ನೀಡಿದ ಮಾಹಿತಿಯ ಮೇರೆಗೆ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಕ್ರಯಕ್ಕೆ ನೀಡುವವರು ಮತ್ತು ಕ್ರಯಕ್ಕೆ ತೆಗೆದುಕೊಳ್ಳುವವರು ನೀಡುವ ಮಾಹಿತಿಯ ಆಧಾರದ ಮೇರೆಗೆ ಪತ್ರವನ್ನು ಬರೆಯುತ್ತೇವೆ. ಕ್ರಯ ಪತ್ರಕ್ಕೆ ಉಭಯ ಪಕ್ಷಗಾರರು ನನ್ನ ಸಮಕ್ಷಮ ಹೆಬ್ಬೆರಳು ಗುರುತನ್ನು ಹಾಕಿರುತ್ತಾರೆ.ಆ ಸಮಯದಲ್ಲಿ 3 ಮತ್ತು 4 ನೇ ಪ್ರತಿವಾದಿಯರಿಗೆ ಅವರ ಶಿಕ್ಷಣದ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ.

ಕೊಟಬಾಗಿ ಗ್ರಾಮದಲ್ಲಿ ನೀರಾವರಿ ಜಮೀನುಗಳು ಎಂದರೆ ನನಗೆ ಮಾಹಿತಿ ಇಲ್ಲ. ಯಾವುದೇ ಪತ್ರವನ್ನು ಬರೆಯುವ ಪೂರ್ವದಲ್ಲಿಯ ಸ್ವತ್ತಿನ ಸ್ವರೂಪದ ಬಗ್ಗೆ ಪತ್ರದಲ್ಲಿ ಬರೆಯುತ್ತೇನೆ ಎಂದರೆ ಸಾಕ್ಷಿಯು ಪಹಣಿಯಲ್ಲಿ ಏನೂ ನಮೂದಾಗಿರುತ್ತದೆಯೋ ಅದನ್ನು ಮಾತ್ರ ಪತ್ರದಲ್ಲಿ ಬರೆಯುತ್ತೇನೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ನೀರಾವರಿ ಜಮೀನುಗಳು ಇದ್ದಲ್ಲಿ, ಅಂತಹ ಜಮೀನುಗಳಲ್ಲಿ ಭಾಗಾಯತ ಜಮೀನು ಎಂದು ನಮೂದಿಸುತ್ತೇವೆ ಎಂದರೆ ಸರಿ. ಸಾಕ್ಷಿಯು ಸ್ವತಃ ಪಹಣಿಯಲ್ಲಿ ನಮೂದಿಸಿದಂತೆ ಜಮೀನಿನ ಸ್ವರೂಪವನ್ನು ಕ್ರಯ ಪತ್ರದಲ್ಲಿ ನಮೂದಿಸುತ್ತೇವೆ ಎಂದು ನುಡಿಯುತ್ತಾರೆ.

ನಿಡಿ-1 ನ್ನು ಬರೆದುಕೊಡುವವರಿಗೆ ಅಂದರೆ ಆ ಜಮೀನನ್ನು ಕ್ರಯಕ್ಕೆ ನೀಡುವವರಿಗೆ, ಆ ಜಮೀನು ಹೇಗೆ ಬಂದಿತ್ತು ಎನ್ನುವ ಬಗ್ಗೆ ನಾನು ಅವರನ್ನು ವಿಚಾರಿಸಿರುವುದಿಲ್ಲ. ವಾದಿ 1 ನೇ ಪ್ರತಿವಾದಿಯ ಮಗಳು ಎಂದರೆ ನನಗೆ ಮಾಹಿತಿ ಇಲ್ಲ. ನಿಡಿ-1 ನ್ನು ಬರೆಯುವ ಪೂರ್ವದಲ್ಲಿ 1 ನೇ ಪ್ರತಿವಾದಿಯನ್ನು ಅವನ ಕುಟುಂಬದ ಸದಸ್ಯರ ಬಗ್ಗೆ ನಾನು ವಿಚಾರಿಸಿಲ್ಲ. ನಿಡಿ-1 ಕ್ಕೆ ವಾದಿಯ ರುಜು ಇಲ್ಲ ಎಂದರೆ ಸಾಕ್ಷಿಯು ನಿಡಿ-1 ನ್ನು ಪಡೆದುಕೊಂಡು ಪರಿಶೀಲಿಸಿ ನಂತರ ಅವರ ರುಜು

Date: 03-08-2026 OS No.87/2019
(DW-4)

ಇಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ತಯಾರಿಸಿರುತ್ತೇನೆ. ಖರೀದಿ ಕೊಡುವವರೇ ಪೋನ್ ಮಾಡಿ ಅವರ ಪೋನಿನಿಂದಲೇ ನನ್ನೊಂದಿಗೆ ವಾದಿಯನ್ನು ಮಾತನಾಡಿಸಿರುತ್ತಾರೆ. ಸದರಿ ಪೋನ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ವಾದಿಯೊಂದಿಗೆಯೇ ಮಾತನಾಡಿರುತ್ತೇನೆ ಎನ್ನುವದಕ್ಕೆ ದೃಡೀಕರಿಸಿಕೊಂಡಿರುವುದಿಲ್ಲ. ನಾನು ಆ ದಿನ 2 ನೇ ಪ್ಯಾರಾದ ಕೊನೆಯಲ್ಲಿ ಹೇಳಿದಂತೆ ದೂರವಾಣಿ ಮೂಲಕ ವಾದಿಯೊಂದಿಗೆ ಮಾತನಾಡಿಲ್ಲ ಎಂದರೆ ಸರಿಯಲ್ಲ. ವಾದಿಯೊಂದಿಗೆ ನಾನು ಆ ದಿನ ಮಾತನಾಡಿರುತ್ತೇನೆ ಎಂದು ತೋರಿಸಲು ಕಾಲ್ ರೇಕಾರ್ಡ ಹಾಜರುಪಡಿಸಿಲ್ಲ. ನಾನು ಆ ದಿನ ಮಾತನಾಡಿರುತ್ತೇನೆ ಎನ್ನುವ ವ್ಯಕ್ತಿ ವಾದಿಯೇ ಆಗಿದ್ದಳು ಎನ್ನುವ ಬಗ್ಗೆ ಯಾವುದೇ ದೃಡೀಕರಣ ಇಲ್ಲ ಎಂದರೆ ಸರಿ. ನಿಡಿ-1 ಕ್ಕೆ ನಾನು ರುಜು ಮಾಡಿರುತ್ತೇನೆ ಎನ್ನುವ ಕಾರಣಕ್ಕಾಗಿ ಮತ್ತು ಅದನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಮತ್ತು 5 ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತಿತದ್ದೇನೆ ಎಂದರೆ ಸರಿಯಲ್ಲ. ವಾದಿಯ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.
ಸಹಿ/-
ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ